
# ಕರ್ಣನ ಹಿರಿಮೆ

ಮೂಲ: ಆರ್.ಪಿ.
ಕನ್ನಡಕ್ಕೆ : ರಾಘವೇಶಾನಂದ
ಕರ್




ಅರ್ಜುನ, ಸಂಜೆಯೊಳಗೆ ನೀನು ಈ ಎರಡು ಬೆಟ್ಟಗಳನ್ನು ದಾನ ಮಾಡಿ ಮುಗಿಸುವುದಾದರೆ, ನಿಜಕ್ಕೂ ನೀನು ಕರ್ಣನಿಗೆ ಸಮನಾಗುವೆ.
ಓ, ಸುಲಭವಾಗಿ ದಾನಮಾಡುತ್ತೇನೆ.
ಅರ್ಜುನ ಆ ಬೆಟ್ಟಗಳನ್ನು ಒಡೆಯುತ್ತಾ ಬಂದವರಿಗೆಲ್ಲಾ ಹಂಚಲಾರಂಭಿಸಿದ.
ಸಂಜೆಯವರೆಗೆ ಮಾಡುತ್ತಾ ಹೋದ. ಆದರೆ ಅರ್ಧವನ್ನೂ ಕೊಟ್ಟು ಮುಗಿಸಿರಲಿಲ್ಲ.
ಬನ್ನಿ, ಬನ್ನಿ. ನಿಮಗೆ ಬೇಕಾದಷ್ಟು ತೆಗೆದುಕೊಳ್ಳಿ.
ಇನ್ನೂ ಹೆಚ್ಚು ಬಿರುಸಾಗಿ ಮಾಡುತ್ತಾ ಹೋದ. ಕತ್ತಲಾಯಿತು. ಆದರೂ ಕಾಲು ಭಾಗದಷ್ಟು ಉಳಿದಿತ್ತು. ಕೊನೆಗೆ ಏನೂ ತೋಚದೆ ಭಾರವಾದ ಹೃದಯದಿಂದ ಸುಮ್ಮನೆ ಕುಳಿತುಬಿಟ್ಟನು.
ಹೇ ಕೃಷ್ಣ! ಕೃಷ್ಣ!
ಕೃಷ್ಣ ಅಲ್ಲಿಗೆ ಬಂದು ನೋಡಿದ....
ಅರ್ಜುನ, ಕೊಟ್ಟಿದ್ದ ವೇಳೆ ಮುಗಿಯಿತು. ಆದರೆ ಇನ್ನೂ,ಇಷ್ಟೊಂದು ಉಳಿದಿದೆ. ಅದೇ ಕರ್ಣನಾಗಿದ್ದರೆ ಯಾವಾಗಲೋ ಕೊಟ್ಟು ಮುಗಿಸುತ್ತಿದ್ದ.
ಸಾಕು, ಸಾಕು, ನಿಲ್ಲಿಸು, ಕರ್ಣನ ಹೊಗಳಿಕೆಯನ್ನು. ಬೇಕಾದರೆ ಪಣ ಕಟ್ಟುತ್ತೇನೆ. ಅವನೂ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಿಲ್ಲ.


ಓ, ನೀನು ಹಾಗೆಂದು ಎಣಿಸುತ್ತೀಯಾ? ಯಾರಲ್ಲಿ ? ಹೋಗಿ ಕರ್ಣನನ್ನು ತಕ್ಷಣ ಕರೆದುಕೊಂಡು ಬನ್ನಿ.
11
ಅಪ್ಪಣೆ, ಸ್ವಾಮಿ.
ಕರ್ಣ ಬಂದು ಕೃಷ್ಣನಿಗೆ ನಮಸ್ಕರಿಸಿದ.
ಕರ್ಣ, ಅದೋ ನೋಡು. ಅವೆರಡು ಬೆಟ್ಟಗಳನ್ನು ರಾತ್ರಿಯೊಳಗಾಗಿ ದಾನ ಮಾಡಿ ಮುಗಿಸುವೆಯಾ?
12
ಏಕೆ ಆಗಬಾರದು? ತಮ್ಮ ಆಜ್ಞೆ.
ಕರ್ಣ ಅತ್ತ ಹೋಗುತ್ತಿದ್ದ ಇಬ್ಬರನ್ನು ಕರೆದ. ಅವರು ಬಂದಾಗ ...
ಇಲ್ಲಿ ಎರಡು ಬೆಟ್ಟಗಳಿವೆ,ಒಂದು ಚಿನ್ನದ್ದು, ಇನ್ನೊಂದು ಬೆಳ್ಳಿಯದು. ನಿಮ್ಮಿಬ್ಬರಿಗೂ ಒಂದೊಂದನ್ನು ದಾನ ಮಾಡುತ್ತೇನೆ. ಹಣವಂತರಾಗಿ ಸಂತೋಷದಿಂದಿರಿ.
13
ಕರ್ಣನೆಂದರೆ ಇವನು. ಕರ್ಣನಿಗೆ ಜಯವಾಗಲಿ!
ಕೃಷ್ಣ, ನೀನು ಹೇಳಿದ ಕೆಲಸವನ್ನು ಮುಗಿಸಿದ್ದೇನೆ. ತೃಪ್ತಿಯಷ್ಟೆ?
14
ಅರ್ಜುನ, ನಿನಗೆ ಕರ್ಣನ ಮೇಲೆ ಅಸೂಯೆ. ಈಗ ನಿನಗೆ ಚೆನ್ನಾಗಿ ಅರ್ಥವಾಗಿರಬೇಕು, ಜನ ಏಕೆ ಕರ್ಣನ ಔದಾರ್ಯವನ್ನು ಹೊಗಳುತ್ತಾರೆಂದು.
15
ಕೃಷ್ಣ, ಈಗ ಚೆನ್ನಾಗಿ ಅರ್ಥವಾಯಿತು. ದಯವಿಟ್ಟು ನನ್ನನ್ನು ಕ್ಷಮಿಸು.